O.S. NO.39-2021
DW - 1.
Dated: 03-11-2023.

ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.

ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಬಿ. ಆರ .ಎ ವಕೀಲರಿಂದ

ನಾನು 2 ನೇ ತರಗತಿ ಓದಿದ್ದೇನೆ. ನಾನು ಪ್ರತಿವಾದಿ ಪತ್ರ ಸಲ್ಲಿಸಿಲ್ಲ. ನನ್ನ ಮತ್ತು ಮಹಾರುದ್ರಪ್ಪನ ನಡುವೆ ವಾಟ್ನಿ ವಿವಾದ ಇದೆ . ನಮ್ಮ ಮನೆತನಕ್ಕೆ ಮೂರು ಹೊಲದ ಆಸ್ತಿಗಳಿವೆ. ಎರಡು ಮನೆಗಳು ಇವೆ. ಜಮೀನುಗಳ ಸರ್ವೆ ನಂಬರ ಮತ್ತು ಕ್ಷೇತ್ರ ಹೇಳಲು ಬರುವುದಿಲ್ಲ. ಮನೆಗಳ ಪಂಚಾಯತಿ ನಂಬರ ಹೇಳಲು ಬರುವುದಿಲ್ಲ . ಸರ್ವೆ ನಂ. 67/3+4 ಎ ಆಸ್ತಿಗಳಲ್ಲಿಯೂ ಕೂಡ 2 ಮನೆಗಳು ಇವೆ ಎಂದರೆ ಸರಿ . ಮಹಾರುದ್ರಪ್ಪನಿಗೆ ದಾವಾದ ಆಸ್ತಿಗಳಲ್ಲಿ ಹಿಸ್ಸೆ ಇದೆ ಎಂದರೆ ನನಗೆ ಗೊತ್ತಿಲ್ಲ. ಐಟೇಮ ನಂ. 4 ಆಸ್ತಿಯಲ್ಲಿ ಕೇವಲ 2 ಎಕರೆ 8 ಗುಂಟೆ 8 ಆಣೆ ನಮ್ಮ ಮನೆತನಕ್ಕೆ ಸೇರಿದ್ದು ಎಂದರೆ ಸರಿ . ನಮ್ಮ ತಂದೆಯ ಹೆಸರು ಚಂದ್ರಪ್ಪ. ಚಂದ್ರಪ್ಪನಿಗೆ ಮೂರು ಅಣ್ಣತಮ್ಮಂದಿರು ಜನ . ಈರಪ್ಪ, ಸದೆಪ್ಪ ಮತ್ತು ಚಂದ್ರಪ್ಪ . ಈರಪ್ಪ, ಸದೆಪ್ಪ ಮತ್ತು ಚಂದ್ರಪ್ಪ ಮೂರು ಜನರ ನಡುವೆ ವಾಟ್ನಿ 1993 ರಲ್ಲಿ ಆಗಿದೆ ಎಂದರೆ ಸರಿ . ದಾವಾದ ಆಸ್ತಿಗಳು ಐಟೇಮ 1 ರಿಂದ 4 ಈರಪ್ಪ, ಸದೆಪ್ಪ ಮತ್ತು ಚಂದ್ರಪ್ಪ ನಡುವೆ ಆದ ಪಾಲು ವಿಭಾಗದಲ್ಲಿ ಚಂದ್ರಪ್ಪನ ಹೆಸರಿಗೆ ಬಂತು ಎಂದರೆ ಸರಿಯಲ್ಲ. ದಾವಾದ ಆಸ್ತಿಗಳು ಐಟೇಮ 1 ರಿಂದ 4 ಆಸ್ತಿಗಳು ಚಂದ್ರಪ್ಪ ಖರೀದಿಸಿರುತ್ತಾರೆ. ಚಂದ್ರಪ್ಪ ಯಾವ ಸಾಲಿನಲ್ಲಿ ಸದರಿ ಖರೀದಿಸಿದ್ದರು ಎಂದು ಮಾಹಿತಿ

ಇಲ್ಲ. ಖರೀದಿ ಪತ್ರಗಳು ನನ್ನ ಹತ್ತಿರ ಇಲ್ಲ . ದಾವಾದ ಆಸ್ತಿಗಳನ್ನು ನಮ್ಮ ತಂದೆ ಖರೀದಿಸಿದ್ದರು ಎಂದು ನಾನು ಪ್ರತಿವಾದಿ ಪತ್ರದಲ್ಲಿ ತಿಳಿಸಿಲ್ಲ . ದಾವಾದ ಆಸ್ತಿಗಳನ್ನು ನಮ್ಮ ತಂದೆ ಖರೀದಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಖರೀದಿ ಪತ್ರವನ್ನು ಸಬ ರೆಜಿಸ್ಟರ ನಲ್‌ಲ್ ತೆಗೆಸುವ ಪ್ರಯತ್ನ ಮಾಡಿಲ್ಲ. ದಾವಾದ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ಹೇಳಿದರೆ ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಐಟೇಮ ನಂ. 2 ಆಸ್ತಿ ಈರಪ್ಪ, ಸದೆಪ್ಪ ಮತ್ತು ಚಂದ್ರಪ್ಪ ನಡುವೆ ಆದ ಪಾಲು ವಿಭಾಗದಲ್ಲಿ ನಮ್ಮ ತಂದಗೆ ಬಂತು ಎಂದರೆ ಸರಿಯಲ್ಲ . ಸದರಿ ಆಸ್ತಿ 2017 ರವರೆಗೆ ನಮ್ಮ ತಂದೆಯ ಹೆಸರಿನಲ್ಲಿಯೇ ಇತ್ತು ಎಂದರೆ ಸರಿ .

ನಮ್ಮ ತಂದೆ ಚಂದ್ರಪ್ಪನಿಗೆ ಇಬ್ಬರು ಮಕ್ಕಳು ನಾನು ಮತ್ತು ಮಹಾರುದ್ರಪ್ಪ . ನಮ್ಮ ತಾಯಿ ನಾಗವ್ವ ತೀರಿಕೊಂಡಿದ್ದಾಳೆ. ನನ್ನ ಮಗಳು ಗಂಗವ್ವ 2 ನೇ ಪ್ರತಿವಾದಿ. ನಮ್ಮ ತಂದೆಗೆ ನಾನೇ ಹಿರಿಯ ಮಗ ಎಂದರೆ ಸರಿ . ಈರಪ್ಪ, ಸದೆಪ್ಪ ಮತ್ತು ಚಂದ್ರಪ್ಪ ನಡುವೆ ಆದ ನಂತರ ನಮ್ಮ ಮನೆತನದ ಹಿರೇತನವನ್ನು ನಮ್ಮ ತಂದೆ ಚಂದ್ರಪ್ಪ ಮಾಡುತ್ತಿದ್ದರು ಎಂದರೆ ಸರಿ . ದಾವಾದ ಆಸ್ತಿಗಳನ್ನು ಹೊರತು ಪಡಿಸಿದ ನಮ್ಮ ಮನೆತನಕ್ಕೆ ಬೇರೆ ಆಸ್ತಿಗಳು ಇಲ್ಲ ಎಂದರೆ ಸರಿ . ನಮ್ಮ ತಂದೆಗೆ ಮನೆತನದ ಆಸ್ತಿಯ ಉತ್ಪನ್ನ ಬಿಟ್ಟು ಬೇರೆ ಉತ್ಪನ್ನ ಇಲ್ಲ ಎಂದರೆ ಸರಿ . ನಮ್ಮ ತಂದೆ ಐಟೇಮ ನಂ . 4 ರ ಆಸ್ತಿಯನ್ನು ಅವರ ಹೆಸರಿನಲ್ಲಿ

ಖರೀದಿಸಿರುತ್ತಾರೆ . ಐಟೇಮ ನಂ. 1 ರಿಂದ 3 ಆಸ್ತಿಯ ಉತ್ಪನ್ನದಿಂದಲೇ ಐಟೇಮ ನಂ. 4 ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ . ನಮ್ಮ ತಂದೆ ಒಕ್ಕಲುತನ ಬಿಟ್ಟು ಬೇರೆ ಯಾವುದೇ ಉದ್ಯೋಗ ಇರಲಿಲ್ಲ ಎಂದರೆ ಸರಿ.

ದಾವಾದ ಆಸ್ತಿಗಳಲ್ಲಿ ಇದುವರೆಗೆ ನನ್ನ ನಮ್ಮ ತಂದೆ ಮತ್ತು ಮಹಾರುದ್ರಪ್ಪನ ನಡುವೆ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ . ದಾವಾದ ಆಸ್ತಿಗಳು ನಮ್ಮ ತಂದೆ ಇದ್ದಾಗ ಅವರ ಕಬ್ಜಾದಲ್ಲಿ ಮತ್ತು ಈಗ ನನ್ನ ಮತ್ತು ವಾದಿಯ ಕಬ್ಜಾದಲ್ಲಿ ಇದೆ ಎಂದರೆ ಸರಿ . ನಾನು ಹಿರೇಮಗ ಆದ ಕಾರಣ ನಾನು ನಮ್ಮ ತಂದೆಗೆ ಸಹಾಯ ಮಾಡುತ್ತಿದ್ದೆ ಎಂದರೆ ಸರಿಯಲ್ಲ .

ಐಟೇಮ ನಂ. 1 ಮತ್ತು 3 ಆಸ್ತಿ ಈಗಲೂ ನಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿ . ಐಟೇಮ ನಂ. 2 ಆಸ್ತಿ ಗಂಗವ್ವಳ ಹೆಸರಿನಲ್ಲಿ ಇದೆ . ಐಟೇಮ ನಂ. 4 ಈಗ ನನ್ನ ಮತ್ತು ವಾದಿಯ ಹೆಸರಿನಲ್ಲಿ ಇದೆ . ಐಟೇಮ ನಂ. 4 ರಲ್ಲಿ ನನ್ನ ಮತ್ತು ವಾದಿಯ ಹೆಸರು ಯಾವಾಗ ದಾಖಲಾಯಿತು ಎಂದು ಗೊತ್ತಿಲ್ಲ . ನನ್ನ ಮತ್ತು ವಾದಿಯ ನಡುವೆ ಯಾವುದೇ ಲೇಖಿ ಆಗಿಲ್ಲ . ಚಂದ್ರಪ್ಪನ ನಂತರ ನನ್ನ ಮತ್ತು ವಾದಿಯ ಹೆಸರು ಯಾವ ಆಧಾರದ ಮೇಲೆ ದಾಖಲಾಯಿತು ಎಂದರೆ ನಮ್ಮ ತಂದೆ ಚಂದ್ರಪ್ಪನೇ ನಮ್ಮ ಹೆಸರನ್ನು ದಾಖಲಿಸಿರುತ್ತಾರೆ. ಐಟೇಮ ನಂ. 4 ಕ್ಕೆ ನನ್ನ ಮತ್ತು ವಾದಿಯ ಹೆಸರು ದಾಖಲಿಸುವ ಸಮಯಕ್ಕೆ ವಾದಿ ತನ್ನ ಹೆಸರನ್ನು ಸೇರಿಸಲು ಕೋರಿಕೆ ಸಲ್ಲಿರಲಿಲ್ಲ . ಇಬ್ಬರ ಹೆಸರು

ದಾಖಲಿಸಲು ಸಮ್ಮತಿ ಇದೆ ಅಂತಾ ವಾದಿ ಯಾವುದೇ ಲೇಖಿ ಮಾಡಿಕೊಟ್ಟಿಲ್ಲ . ಐಟೇಮ ನಂ. 4 ಈಗಲೂ ನನ್ನ ಮತ್ತು ಮಹಾರುದ್ರಪ್ಪನ ಸಾಮೂಹಿಕ ಕಬ್ಜಾದಲ್ಲಿ ಇದೆ ಎಂದರೆ ಸರಿ . ಐಟೇಮ ನಂ. 1 ಮತ್ತು 3 ಕೂಡ ಸಾಮೂಹಿಕ ಕಬ್ಜಾದಲ್ಲಿ ಇವೆ . ಐಟೇಮ ನಂ. 2 ಹೊರತು ಪಡಿಸಿ ಉಳಿದ ಆಸ್ತಿಗಳಲ್ಲಿ ನನ್ನ ಮತ್ತು ವಾದಿಯ ನಡುವೆ ಇದುವರೆಗೂ ಪಾಲು ಆಗಿಲ್ಲ . ಐಟೇಮ ನಂ. 2 ಆಸ್ತಿಗೆ ಗಂಗವ್ವಳ ಹೆಸರು ಚಂದ್ರಪ್ಪನೇ ದಾಖಲಿಸಿರುತ್ತಾರೆ . ಯಾವ ಆಧಾರದ ಮೇಲೆ ಹೆಸರು ದಾಖಲಾಯಿತು ಎಂದು ಹೇಳಲು ಆಗುವುದಿಲ್ಲ . ಚಂದ್ರಪ್ಪ ಗಂಗವ್ವಳ ಹೆಸರಿಗೆ ಯಾವ ಕಾಗದ ಮಾಡಿಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ . ನಾನು ಮತ್ತು ನನ್ನ ಮಗಳು ಗಂಗವ್ವ ಕೂಡಿ ವಾದಿಯ ಹಿಸ್ಸೆ ನಷ್ಟ ಮಾಡಲು 2 ನೇ ಐಟೇಮ ಆಸ್ತಿಗೆ ಗಂಗವ್ವನ ಹೆಸರು ಹಚ್ಚಿಸಿದ್ದೇವೆ ಎಂದರೆ ಸರಿಯಲ್ಲ . ಐಟೇಮ 2 ನ್ನು ಗಂಗವ್ವಳಿಗೆ ಕೊಡಲು ಚಂದ್ರಪ್ಪನಿಗೆ ಕೊಡಲು ಹಕ್ಕಿಲ್ಲ ಎಂದರೆ ಗೊತ್ತಿಲ್ಲ . ನಾನು ಅಥವಾ ವಾದಿ ಗಂಗವ್ವಳ ಹೆಸರಿಗೆ ಐಟೇಮ ನಂ. 2 ಹಚ್ಚಿಸುವ ಕಾಲಕ್ಕೆ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ . ಗಂಗವ್ವಳ ಹೆಸರಿಗೆ ಐಟೇಮ ನಂ. 2 ಹಚ್ಚಿಸುವ ಕಾಲಕ್ಕೆ ಚಂದ್ರಪ್ಪ ವಾದಿಯ ಸಮ್ಮತಿ ಪಡೆದಿಲ್ಲ . ಗಂಗವ್ವಳ ಹೆಸರಿಗೆ ಐಟೇಮ ನಂ. 2 ಹಚ್ಚಿಸುವ ಕಾಲಕ್ಕೆ ನನಗೆ ಅಥವಾ ವಾದಿಗೆ ಯಾವುದೇ ನೋಟಿಸ ಬಂದಿಲ್ಲ . ಗಂಗವ್ವಳ ಹೆಸರಿಗೆ ಐಟೇಮ ನಂ. 2 ಹಚ್ಚಿಸಿರುವ ವಿಷಯ ವಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ . ಗಂಗವ್ವಳ ಹೆಸರಿಗೆ ಐಟೇಮ

ನಂ. 2 ಹಚ್ಚಿಸುವ ಕಾಲಕ್ಕೆ ವಾದಿಗೆ ಯಾವುದೇ ನೋಟಿಸ ಬಂದಿರಲಿಲ್ಲ ಮತ್ತು ಮಾಹಿತಿ ಕೂಡ ಇರಲಿಲ್ಲ ಎಂದರೆ ನನಗೂ ಕೂಡ ಮಾಹಿತಿ ಇರಲಿಲ್ಲ . ಐಟೇಮ ನಂ. 2 ಆಸ್ತಿಯಲ್ಲಿ ಗಂಗವ್ವಳಿಗೆ ಹಕ್ಕಿಲ್ಲ ಎಂದರೆ ಗೊತ್ತಿಲ್ಲ .

ಐಟೇಮ ನಂ. 2 ಊರಿಗೆ ಹತ್ತಿರದಲ್ಲಿ ಇದೆ ಎಂದರೆ ಸರಿ . ಅಲ್ಲಿಯೇ ಸಮೀಪ ಕಲ್ಯಾಪ ಮಂಟಪ ,ಶಾಲೆ ರಸ್ತೆ ಮತ್ತು ಮನೆಗಳು ಇವೆ ಎಂದರೆ ಸರಿ . ದಾವಾದ ಆಸ್ತಿಗಳ ಪೈಕಿ ಐಟೇಮ ನಂ. 2 ಹೆಚ್ಚಿನ ಮೌಲ್ಯ ಉಳ್ಳದ್ದು ಎಂದರೆ ಸರಿ. ಬೆಳವಡಿಯಲ್ಲಿ ರಸ್ತೆಗೆ ಹತ್ತಿರ ಇರುವ ಜಮೀನುಗಳು ಈಗ 1 ಎಕರೆಗೆ 20 ಲಕ್ಷ ಬೆಲೆ ಇದೆ ಎಂದರೆ ಸರಿ . ಐಟೇಮ ನಂ. 2 ರಲ್ಲಿ 2 ಮನೆ ಕಟ್ಟಿಸಿ 2 ವರ್ಷ ಆಗಿದೆ ಅದು ಆರ .ಸಿ.ಸಿ ಮನೆ . ಸದರಿ ಮನೆಯನ್ನು ಚಂದ್ರಪ್ಪನ ಜೀವಿತಾವಧಿಯಲ್ಲಿಯೇ ಕಟ್ಟಲಾಗಿದೆ ಎಂದರೆ ಸರಿ . ಮನೆ ಕಟ್ಟಲು ಕಲ್ಲುಗಳು, ಸಿಮೆಂಟ, ಇಟ್ಟಂಗಿ, ಕಬ್ಬಿಣ ಇವುಗಳನ್ನು ಗಂಗವ್ವ ತರಿಸಿದ್ದಾರೆ ಎಂದು ತೋರಿಸಲು ದಾಖಲೆ ಇಲ್ಲ . ಗಂಗವ್ವಳ ಗಂಡನ ಮನೆತನಕ್ಕೆ 3 ಎಕರೆ ಜಮೀನುಪಟ್ಟಿಹಾಳದ ಕಡೆ ಇದೆ . ಗಂಗವ್ವಳ ಗಂಡನಿಗೆ ಸಹೋದರ ಇರುವುದಿಲ್ಲ. ಪಟ್ಟಿಹಾಳದ ಕಡೆ ಇರುವ ಜಮೀನು ಕೆಂಪು ಮಸಾರಿ ಜಮೀನು ಎಂದರೆ ಸರಿ . ಬೋರವೆಲ ಹಾಕಿಸಿದ್ದಾರೆ . ಗಂಗವ್ವಳಿಗೆ ನೀರಾವರಿ ಜಮೀನುಗಳು ಇತ್ತು ಅದರಿಂದ ಉತ್ಪನ್ನ ಇತ್ತು ಎಂದು ನಾನು ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ. ಐಟೇಮ ನಂ. 2 ರಲ್ಲಿ ಎರಡು ಮನೆಗಳು ಚಂದ್ರಪ್ಪನೇ ಕಟ್ಟಿಸಿದ್ದಾರೆ ಎಂದರೆ ಸರಿ . ವಾದಿಗೆ

ಹಿಸ್ಸೆ ಕೊಡುವುದನ್ನು ತಪ್ಪಿಸಲು ಸದರಿ ಮನೆಗಳನ್ನು ಗಂಗವ್ವ ಕಟ್ಟಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾದ ಎಲ್ಲ ಆಸ್ತಿಗಳಲ್ಲಿ ವಾದಿಗೆ ಅರ್ಧ ಹಿಸ್ಸೆ ಇದೆ ಎಂದರೆ ಗೊತತಿಲ್ಲ . ಮಹಾರುದ್ರಪ್ಪನಿಗೆ ಹಿಸ್ಸೆ ಕೊಡುವುದನ್ನು ತಪ್ಪಿಸಲು ಈಗಾಗಲೇ ವಾಟ್ನಿ ಆಗಿದೆ ಮತ್ತು ಗಂಗವ್ವಳೇ ಮನೆ ಕಟ್ಟಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ತಂದೆಯೇ ಗಂಗವ್ವಳಿಗೆ ಐಟೇಮ ನಂ. 2 ಬಿಟ್ಟು ಕೊಟ್ಟಿದ್ದಾರೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ . ಮನೆಗಳಲ್ಲಿ ಪಾಲು ಆಗಿದ್ದು ನನಗೊಂದು ಮನೆ ವಾದಿಗೊಂದು ಮನೆ ಬಂದಿದೆ ಅಂತಾ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ . ಇದುವರೆಗೆ ನಮ್ಮ ಮನೆತನದ ಆಸ್ತಿಗಳಲ್ಲಿ ನನ್ನ ಮತ್ತು ವಾದಿಯ ನಡುವೆ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ .

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕೀಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.

GRL